ಸಂಗ್ರಹಣೆ ಆಗಿರುತ್ತದೆ ಮತ್ತು ಕಳೆದ ವರ್ಷಕ್ಕೆ ನೋಡಿದರೆ ಪ್ರಸ್ತುತ ವರ್ಷದಲ್ಲಿ 24.28 ಕೋಟಿ ರೂ.ಗಳ ಅಬಕಾರಿ ಸುಂಕ ಸಂಗ್ರಹಣೆ ಹೆಚ್ಚಳವಾಗಿರುತ್ತದೆ. ಇದು ಶೇಕಡಾ 12.98 ರಷ್ಟು ಹೆಚ್ಚಳವಾಗಿರುತ್ತದೆ.

ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಳಚರಂಡಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 939(1054)

ಸದಸ್ಯರ ಹೆಸರು: ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಪ್ರಶ್ನೆ

1. ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯ ವ್ಯಾಪ್ತಿಯಲ್ಲಿ ಒಳಚರಂಡಿ ಯೋಜನೆ ಅತಿಯಾಗಿ ಹದಗೆಟ್ಟಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಅವಳಿ ನಗರದ ಭಾಗದಲ್ಲಿ ಒಳಚರಂಡಿ ಕೊಳವೆಗಳು ನವೀಕರಿಸುವ ಇಲ್ಲವೆ ಹೊಸದಾಗಿ ಜೋಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

3. ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು?

4. ಕಾಮಗಾರಿ ಯಾವ ವರ್ಷದಿಂದ ಕೈಗೆತ್ತಿಕೊಳ್ಳಲಾಗುವುದು?

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಉತ್ತರ

1. ಬಂದಿದೆ.

2. ಹಾಲಿ ಅವಳಿ ನಗರದಲ್ಲಿ ಕೆಲವು ಹಳೆಯ ಭಾಗಗಳಿಗೆ ಮಾತ್ರ ಒಳಚರಂಡಿ ವ್ಯವಸ್ಥೆ ಅಳವಡಿಸಲಾಗಿದ್ದು ಇತ್ತೀಚೆಗೆ ಈ ಅವಳಿ ಪಟ್ಟಣವು ಬೃಹದಾಕಾರವಾಗಿ ಬೆಳೆದಿರುವ ಕಾರಣ ವಿವರವಾದ ಸರ್ವೆ ಕಾರ್ಯ ನಡೆಸಿ ಅಂದಾಜನ್ನು ತಯಾರಿಸಲು ರೂ.20.00 ಲಕ್ಷ ಬಿಡುಗಡೆ ಮಾಡುವಂತೆ ಸ್ಥಳೀಯ ಸಂಸ್ಥೆಯನ್ನು ಕೋರಲಾಗಿದೆ. ಸ್ಥಳೀಯ ಸಂಸ್ಥೆಯಿಂದ ಹಣ ಬಿಡುಗಡೆಯಾದ ನಂತರ ವಿವರವಾದ ಅಂದಾಜನ್ನು ತಯಾರಿಸಲಾಗುವುದು.

3. ಅಂದಾಜನ್ನು ತಯಾರಿಸಬೇಕಾಗಿರುತ್ತದೆ.

4. ಅಂದಾಜು ಪಟ್ಟಿ ತಯಾರಿಸಿದ ನಂತರ ಈ ವರ್ಷವೇ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಲಾಗುವುದು.

ಕೆ.ಯು.ಆರ್.ಡಿ.ಎಫ್.ಸಿ. ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 940(1053)

ಸದಸ್ಯರ ಹೆಸರು: ಶ್ರೀ ಹೆ.ಎನ್.ಳಿ ಜಬ್ಬಾರ್‌ಖಾನ್ ಹೈಯಾತ್ ಖಾನ್(ಹುಬ್ಬಳ್ಳಿ)

ಪ್ರಶ್ನೆ

1. ಕೆಯುಆರ್‌ಡಿಎಫ್‌ಸಿ ಯೋಜನೆಯಡಿಯಲ್ಲಿ ಬೆಂಗಳೂರು, ತುಮಕೂರು, ಚನ್ನಪಟ್ಟಣ, ಮಂಗಳೂರು, ರಾಮನಗರ, ಮೈಸೂರು ನಗರಗಳು ಒಳಪಟ್ಟಿರುತ್ತವೆ, ಆದರೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಒಳಪಟ್ಟಿರುವುದಿಲ್ಲ ಕಾರಣವೇನು?

2. ಈ ಯೋಜನೆಯಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಒಳಪಡಿಸಲಿಕ್ಕೆ ಏನು ತೊಂದರೆಗಳಿವೆ?

3. ಈ ಯೋಜನೆಯಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಸೇರ್ಪಡಿಸುವುದು ಯಾವ ಸಾಲಿನಿಂದ?

4. ಇಲ್ಲವಾಗಲ್ಲಿ ಕಾರಣವೇನು?

ಉತ್ತರಿಸುವ ಸಚಿವರು: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಉತ್ತರ

1. ಬೆಂಗಳೂರು ನಗರದ ಬೆಳವಣಿಗೆಯನ್ನು ವಿಕೇಂದ್ರೀಕರಣ ಮಾಡುವ ದೃಷ್ಟಿಯಿಂದ ಏಷಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನಡಿಯಲ್ಲಿ ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು, ತುಮಕೂರು, ರಾಮನಗರ ಮತ್ತು ಚನ್ನಪಟ್ಟಣ ನಗರಗಳು ಒಳಗೊಂಡಿರುತ್ತದೆ.

ಮೇಲಿನ ಯೋಜನೆಯಲ್ಲಿ ಬೆಂಗಳೂರು ನಗರವು ಒಳಗೊಂಡಿರುವುದಿಲ್ಲ, ಆದರೆ, ಕೇಂದ್ರ ಸರ್ಕಾರವು ಪ್ರಾಯೋಜಿಸಿರುವ ಮೆಗಾಸಿಟಿ ಯೋಜನೆಯಡಿಯಲ್ಲಿ ಬೆಂಗಳೂರು